*ಮಹಾವೀರ ಕಾಸಾರ, ಚನ್ನಗಿರಿ*
*ಮಂತ್ರಕ್ಕೆ ಮಾವಿನಕಾಯಿ ಉದುರುವಂತಿದ್ದರೆ?*



ಒಳ್ಳೇ ಮಾತು ನಿಮ್ದು! ಮಂತ್ರಕ್ಕೆ ಅದುರಲು, ಉದುರಲು ಅದೇನು ವಾಮಾಚಾರ ನಂಬುವ ಮಂತ್ರಿಯೇ?

*ಬಿ.ಎಸ್.ನಾರಾಯಣಸ್ವಾಮಿ, ಬೋಧನಹೊಸಹಳ್ಳಿ*
*ಮಂತ್ರ ಹೇಳುವವರಿಗೂ, ಮಾತ್ರೆ ಕೊಡುವವರಿಗೂ ಏನು ವ್ಯತ್ಯಾಸ?*
ಮಾತ್ರೆ ಕೊಡೋವ್ರು ಮನೆ ತನಕ, ಮಂತ್ರ ಹೇಳೋವ್ರು ಕಡೆತನಕ

*ಆರ್. ಮಧುಸೂದನ್, ಹಾಸನ*
*ಹೃದಯಕ್ಕೆ ಬೆಂಕಿ ಇಟ್ಟು, ದೇವರಿಗೆ ದೀಪ ಹಚ್ಚುತ್ತಾರಲ್ಲ...?*
ತಪ್ಪು, ಜನರದ್ದೂ ಅಲ್ಲ, ಬೆಂಕಿಯದ್ದೂ ಅಲ್ಲ. ಅದೇ ಕಿಡಿ ಇಲ್ಲಿ ಜ್ವಾಲೆ, ಅಲ್ಲಿ ದೀಪ ಆಗುತ್ತದೆ; ಹೃದಯ ಕರ್ಪೂರ, ದೇವ ಬಂಡೆ!

*ನರಸಿಂಹ ಎಂ. ವೈ, ಹೊನ್ನಾವರ*
*ಕಲೆಗಳಲ್ಲಿ ದೊಡ್ಡ ಕಲೆ ಯಾವುದು?*



ಡ್ರೈಕ್ಲೀನ್ ಮಾಡಿದರೂ ಹೋಗದ ಕಲೆ!

*ಎಂ.ಎಸ್. ಸೋಮಶೇಖರ್, ಮೈಸೂರು*
*ಕುರೂಪಿ ಸ್ತ್ರೀಯನ್ನು ಮದುವೆಯಾಗುವುದು ಒಳ್ಳೆಯದೆಂದು ಅನುಭವಸ್ಥರು ಹೇಳುತ್ತಾರಲ್ಲಾ...?*
ದಡ್ಡರು! ಕುರೂಪ ಹೆಚ್ಚಾದಷ್ಟೂ ಮೇಕಪ್ ಖರ್ಚು ಏರುತ್ತದೆಂಬ ಅರಿವೇ ಇಲ್ಲ ಅವರಿಗೆ!

*ಜಗದೀಶ ಎಂ.ಎನ್, ನಗರ*
*ದೇವರಿಗೆ ನೈವೇದ್ಯ ಮಾಡುವಾಗ ಅರ್ಚಕರು ಗರ್ಭಗುಡಿಯ ಬಾಗಿಲನ್ನು ಮುಚ್ಚುತ್ತಾರೆ, ಏಕಿರಬಹುದು?*
ನೈವೇದ್ಯದಲ್ಲಿ ಸಿಂಹಪಾಲು ಅರ್ಚಕರಿಗೇ ಬೇಕಿರಬಹುದು!

*ಖಲಂದರ್ ಅಖೀರ್ಖ್, ಜಾವಗಲ್*
*ರಾಮ-ರಹೀಮರ ನಡುವೆ ಸಾಮರಸ್ಯದ ಕೊರತೆ ಎದ್ದು ಕಾಣುತ್ತಿದೆಯಲ್ಲಾ ರಾಮ್?*
ಅಲ್ಲಾ–ರಾಂ ಟೈಂಗೂ, ಟೈಂ ಬಾಂಬಿಗೂ ಬಳಸಲಾಗುತ್ತದೆ; ಸೆಟ್ ಮಾಡೋದು ನಮಗ್ ಬಿಟ್ಟಿದ್ದು!

*ಎಂ.ಆರ್. ಪವನ್ ಕುಮಾರ್, ಬಳ್ಳಾರಿ*
*ನಾರಿ ಸ್ವರ್ಗಕ್ಕೆ ದಾರಿಯೋ, ನರಕಕ್ಕೆ ದಾರಿಯೋ?*
ಅವಳು ದಾರಿಯೇ ಅಲ್ಲ! ಒಲಿದರೆ ಅವಳೇ ಸ್ವರ್ಗ, ಮುನಿದರೆ ಅವಳೇ ನರಕ!

*ಎಸ್. ವಿ. ಶ್ರೀನಿವಾಸ್, ಮೈಸೂರು*
*ಹೀಗೂ ಉಂಟೆ...?*
ಇದು ನಿಮ್ಮ ಬೆಚ್ಚಿಸುವ ಛೀ ಟಿ.ವಿ.ಯ ಕೊಡುಗೆ!

*ಲ್ಯಾಂಡ್ ಬ್ಯಾಂಕ್ ಡಿ. ಚಂದ್ರಕುಮಾರ್*
*ಕನ್ನಡಿಗರೇಕೆ ಪತ್ರಿಕೆಗಳನ್ನು ಕೊಂಡು ಓದುವ ಹವ್ಯಾಸ ಬೆಳೆಸಿಕೊಂಡಿಲ್ಲ?*
ವಸುಧೈವ ಕುಟುಂಬಕಂ ಎಲ್ಲರ ಪೇಪರ್‌ಗಳೂ ತನ್ನವೇ ಎಂಬ ವಿಶಾಲಮನೋಭಾವ!

*ಎಂ.ಜಿ. ನೇಹವರ್ಷಿಣಿ, ಬಳ್ಳಾರಿ*
*ಮಂತ್ರವಾದಿಗೂ, ಮೂಲವ್ಯಾಧಿಗೂ ಏನು ವ್ಯತ್ಯಾಸ?*
ಮಂತ್ರವಾದಿ ಮೂಲವ್ಯಾಧಿಗೆ ಹೆದರುತ್ತಾನೆ, ಮೂಲವ್ಯಾಧಿ ಮಂತ್ರವಾದಿಗೆ ಹೆದರುವುದಿಲ್ಲ!

*ಜಿ.ಆರ್. ಆದಿನಾರಾಯಣಮುನಿ, ಬೆಂಗಳೂರು*
*ಪ್ರತ್ಯಕ್ಷ ದೇವರು ಯಾರು?*
ಎನ್.ಟಿ.ಆರ್! ಅತಿ ಹೆಚ್ಚು ಬಾರಿ ಪ್ರತ್ಯಕ್ಷವಾದ ದೇವರು ಅವರೇ!

*ಎಸ್.ಜಿ. ಕರನಂದಿ, ಹುನಗುಂದ*
*ದಿವಂಗತ ಇಂದಿರಾಗಾಂಧಿಯವರ ಗರೀಬಿ ಹಟಾವೋ ಕಾರ್ಯಕ್ರಮ ಎಲ್ಲಿಗೆ ಬಂದಿದೆ?*
ಸೊಗಸಾಗಿ ನಡೆದಿದೆ; ಈಗ ಇಂದಿರಾಜೀಯ ಕುಟುಂಬದಲ್ಲಿ ಗರೀಬಿಯ ಗಂಧವೂ ಇಲ್ಲ!

*ಶಿರಾಲಿ ದೀಪಕ್ ಆರ್. ಶೇಟ್, ಬೆಂಗಳೂರು*
*ಹೆಣ್ಣಿನಿಂದಲೇ ಪ್ರಪಂಚ ಎಂದು ಗೊತ್ತಿದ್ದೂ ಗಂಡುಮಗು ಬೇಕು ಎನ್ನುವವರಿಗೆ ನಿಮ್ಮ ಕಿವಿಮಾತು?*
ಇಪ್ಪತ್ತು ವರ್ಷದ ನಂತರದ ಸೊಸೆಗಿಂತ ಇಂದಿನ ಮಗಳು ಚೆನ್ನ!

## ಬಹುಮಾನಿತ ಪ್ರಶ್ನೆ

*ಎಂ.ಎಸ್. ಗುರುರಾಜಾಚಾರು, ಬಳ್ಳಾರಿ*
*ಎಲ್ಲಿಗಾದರೂ ಹೋಗಲು ಅಡ್ಡದಾರಿ ಇದೆ; ಚಂದ್ರನ ಹತ್ತಿರ ಹೋಗಲು?*
ಲಾರಿಗೆ ಅಡ್ಡ ಹೋದರಾಯ್ತು, ಚಂದ್ರನನ್ನೂ ದಾಟಿ ಸ್ವರ್ಗವನ್ನೇ ತಲುಪಿಬಿಡಬಹುದು.

*ಹೆಚ್.ಆರ್. ಕಡಿವಾಲ, ಬಾದಾಮಿ*
*ರಾಮರಾಜ್ಯದ ಕನಸು ನನಸಾಗುವುದು ಯಾವಾಗ?*
ಆಗಿದೆಯಲ್ಲಾ... ಹೆಂಡತಿಯನ್ನು ಸಂಶಯಿಸುವವರು, ಮೂಗು, ಕಿವಿಗಳ ಪಾಸ್ಟಿಕ್ ಸರ್ಜನ್‌ಗಳು, ಪಿತೃವಾಕ್ಯ ಪರಿಪಾಲಕ ಕುಮಾರರು, ಎಲ್ಲಾ ಇದ್ದಾರಲ್ಲಾ...!

*ವಿ.ಎಸ್. ಅವಧಾನಿ, ಹೊನ್ನಾವರ*
*ಹೊಸ ಚಲನಚಿತ್ರಗಳು ಶುಕ್ರವಾರದಂದೇ ಯಾಕೆ ಬಿಡುಗಡೆಯಾಗುತ್ತವೆ?*
ನೋಡಿದವರು ಶನಿವಾರ ಭಾನುವಾರ ಸುಧಾರಿಸಿಕೊಳ್ಳಲೆಂದು!

*ಶ್ಯಾಮಸುಂದರ್, ಬೆಂಗಳೂರು*
*ಭಿನ್ನ-ವಿಭಿನ್ನ ಪ್ರಶ್ನೆಗಳಿಗೆ ನಗೆಯ ಅಲೆಯನ್ನೆಬ್ಬಿಸುವ ಉತ್ತರವನು ನೀಡುತಿರೆ, ಈ ಕೌಶಲ್ಯದ ಮರ್ಮವೇನು ರಾಮಣ್ಣ?*



ಅಳುವ ಮಗುವಿನ ಮೊಗದಿ ನಗೆಯನು ಕಾಂಬ ತಾಯಿಯ ಬಯಕೆಯೇ ಮರ್ಮವು ಸುಂದ್ರಣ್ಣ!

*ಮಲ್ಲಿಕಾರ್ಜುನ, ಜತ್ತ*
*ದೆವ್ವಗಳು ಹಗಲಿನಲ್ಲಿ ಎಲ್ಲಿ ಹೋಗಿರುತ್ತವೆ?*
ಮಂತ್ರಿಗಳ ವೇಷದಲ್ಲಿ, ವಿಧಾನಸೌಧಕ್ಕೆ!

*ಎಂ.ಜಿ. ಶಿವರಾಂ, ಬೆಂಗಳೂರು*
*ವಿವಿಧ ಅಂಗಾಂಗಗಳು ಮೇಳೈಸಿ ದೇಹ ಅಭಿವೃದ್ಧಿಸುವಂತೆ ವಿವಿಧ ಪಕ್ಷಗಳು ಸೇರಿ ದೇಶ ಅಭಿವೃದ್ಧಿ ಮಾಡಲು ಏಕೆ ಶ್ರಮಿಸುತ್ತಿಲ್ಲ?*
ಎಡಪಕ್ಷ ಬಲಹೀನವೂ, ಬಲಪಕ್ಷ ಎಡವಟ್ಟು, ಮಧ್ಯ ಪಕ್ಷ ಮದ್ಯದಲ್ಲಿ ಮುಳುಗಿರುವುದರಿಂದ ಸೇರಲಾಗದಂತೆ!

■ ರಾಮ್